ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೬೮೯ (೨೧೨೪)

ಸದಸ್ಯರ ಹೆಸರು ಶ್ರೀ ರಮೇಶ್ ಕುಮಾರ್ ಕೆ ಆರ್ (ಶ್ರೀನಿವಾಸಪುರ)

ಉತ್ತರಿಸುವ ಸಚಿವರು ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಶ್ರೀನಿವಾಸಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರೀ ಮೆಟ್ರಿಕ್ ಹಾಸ್ಟಲ್ ಗಳ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, (ವಿವರ ನೀಡುವುದು)	ಹೌದು ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಪರಿಶಿಷ್ಟ ಜಾತಿಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಅಗತ್ಯವಿರುವುದಾಗಿ ಬೇಡಿಕೆ ಬಂದಿರುತ್ತದೆ ೧ ಮೆಟ್ರಿಮ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯಗಳಿಗಾಗಿ ಶ್ರೀನಿವಾಸಪುರ ಟೌನ್ ರಾಯರ್ ಪಾದ ಯಲ್ಲೂರು ಪುಲುಗೂರು ಕೋಟಿ, ಅಲಮಟ್ಟಿ, ಮುತ್ತರಪಲ್ಲಿ, ಅರಿಕುಂಟೆ, ಎನ್ ವಡ್ಡಹಳ್ಳಿ ಮತ್ತು ಬೈರಗಾನಪಲ್ಲಿಯಿಂದ ಬೇಡಿಕೆ ಬಂದಿರುತ್ತದೆ ೨ ಮೆಟ್ರಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಯಲಗಳಿಗಾಗಿ ಯಲ್ಲೂರು ಮತ್ತು ಮುಡಿ ಮಂಡಗಾನಿಂದ ಬೇಡಿಕೆ ಬಂದಿರುತ್ತದೆ

ಆ	ಹಾಗಿದ್ದಲ್ಲಿ ಈ ಅಗತ್ಯತೆಯನ್ನು ಯವಾಗ ಪೂರೈಸಲಗುವುದು?	ಆಯವ್ಯಯದಲ್ಲಿ ಒದಗಿಸಿದ ಅನುದಾನ ಲಭ್ಯತೆ, ಅವಶ್ಯಕತೆ ಹಾಗೂ ರಾಜ್ಯದಲ್ಲಿನ ಇತರೆ ಬೇಡಿಕೆಗಳೊಂದಿಗೆ ಹೋಲಿಸ ಪೂರೈಸಲು ಪರಿಶೀಲಿಸಲಾಗುವುದು
ಇ	ಶ್ರೀನಿವಾಸಪುರ ತಲ್ಲೂಕಿನ ಹಿಂದುಳಿದ ವರ್ಗಗಳ ವಿದ್ಯರ್ಥಿಗಳಿಗೆ ಪ್ರೀ ಮೆಟ್ರಿಕ್ ಹಾಸ್ಟಲ್ಗಳ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು
ಈ	ಹಾಗಿದ್ದಲ್ಲಿ ಯಾವಾಗ ವಿದ್ಯಾರ್ಥಿನಿಯಲವನ್ನು ಪ್ರಾರಂಭಿಸಲು ಕ್ರಮಕೈಗೊಳ್ಳಲಾಗುವುದು?	ರಾಜ್ಯದ ಒಟ್ಟಾರೆ ಬೇಎಕೆಯ ಜೊತೆಯಲ್ಲಿ ಶ್ರೀನಿವಾಸಪುರ ತಾಲ್ಲೂಕಿನ ಬೇಡಕೆಯನ್ನು ಸಹ ಪರಿಶೀಲಿಸಿ, ೨೦೦೭-೦೮ ನೇ ಸಾಲಿನ ಆಯವ್ಯಯದ ಲಭ್ಯತೆಯೆಯನ್ನಾಧರಿಸಿ ಶ್ರೀನಿವಾಸಪುರ ತಾಲ್ಲೂಕಿಗೂ ಹೊಸ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	೧೬೯೦ (೨೧೨೫)
ಸದಸ್ಯರ ಹೆಸರು	ಶ್ರೀ ರಮೇಶ್ ಕುಮಾರ್ ಕೆ ಆರ್ (ಶ್ರೀನಿವಾಸಪುರ)
ಉತ್ತರಿಸುವ ಸಚಿವರು	ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)